
# ಶುಭವಾರ್ತೆ ಕಥಾಪುಸ್ತಕ

## ಎರಡು





ಇದು ನನ್ನ ಶುಭವಾರ್ತೆ ಮೊದಲನೆ ಕಥಾಪುಸ್ತಕ


ನನ್ನ ಹೆಸರು

_______________________________

ನನ್ನ ಶುಭವಾರ್ತೆ ಮೊದಲನೆ ಕಥಾಪುಸ್ತಕವನ್ನು
ನಾನು ಓದಬಲ್ಲೆ

ಈ ಕಥೆಗಳನ್ನು ಸೃಷ್ಟಿಕರ್ತನಾದ ದೇವರ ಪವಿತ್ರ ಪುಸ್ತಕದಿಂದ ಆರಿಸಿಕೊಳ್ಳಲಾಗಿದೆ.

ಈ ಕಥಾಪುಸ್ತಕದಲ್ಲಿರುವ ಎಲ್ಲ ಚಿತ್ರಗಳನ್ನು ಭಾರತದ ಬುಡಕಟ್ಟು ಮಕ್ಕಳು ಬರೆದಿದ್ದಾರೆ.
ಶುಭವಾರ್ತೆ ಕಥಾಪುಸ್ತಕ ಎರಡು. ಕಾಪಿರೈಟ್ 2017. ಪ್ರಿಂಟೆಡ್ ಇನ್ ಇಂಡಿಯಾ. ಹೆಚ್ಚಿನ ವಿಷಯಗಳಿಗಾಗಿ ಸಂಪರ್ಕಿಸಿ:
WBTC India, P.O. Box 8478, Bangalore 560084. Email: info@wbtcindia.com





ದೊಡ್ಡ, ದೊಡ್ಡ, ದೊಡ್ಡ ಬಿರುಗಾಳಿ ............ 2–15
ವಿಶೇಷ ಕೊಡುಗೆ................................ 16–32

# ದೊಡ್ಡ, ದೊಡ್ಡ, ದೊಡ್ಡ ಬಿರುಗಾಳಿ


ನಮ್ಮ ಪೂರ್ವಿಕರ ಕಾಲದಲ್ಲಿ...

ಅನೇಕ ಜನರು ನನಗೆ ಕಾಣುತ್ತಿದ್ದಾರೆ.

ಸೃಷ್ಟಿಕರ್ತನಾದ ದೇವರನ್ನು
ಅನೇಕರು ತಿಳಿದಿಲ್ಲ.







ಒಬ್ಬ ಮನುಷ್ಯ ನನಗೆ ಕಾಣುತ್ತಿದ್ದಾನೆ.
ಅವನ ಹೆಸರು ನೋಹ.

ನೋಹನು ಸೃಷ್ಟಿಕರ್ತನಾದ ದೇವರಿಗೆ
ಹಾಡುತ್ತಿದ್ದಾನೆ.

ಸೃಷ್ಟಿಕರ್ತನಾದ ದೇವರು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: ‘ನೋಹನೇ, ದೊಡ್ಡ, ದೊಡ್ಡ, ದೊಡ್ಡ ನಾವೆ ಕಟ್ಟು.

ಬೇಗನೆ, ದೊಡ್ಡ ಬಿರುಗಾಳಿ ಬರುತ್ತಿದೆ.







ನಾನು ನಿನ್ನನ್ನು, ನಿನ್ನ ಕುಟುಂಬವನ್ನು ಮತ್ತು ಎಲ್ಲ ಪ್ರಾಣಿಗಳನ್ನು ಕಾಪಾಡುತ್ತೇನೆ.

ಬೇಗನೆ, ದೊಡ್ಡ ಬಿರುಗಾಳಿ ಬರುತ್ತಿದೆ.’

ನೋಹನು ಕಟ್ಟುತ್ತಾ...ಕಟ್ಟುತ್ತಾ...ಕಟ್ಟುತ್ತಾ
ಇರುವುದು ನನಗೆ ಕಾಣುತ್ತಿದೆ.

ಬೇಗನೆ, ದೊಡ್ಡ ಬಿರುಗಾಳಿ ಬರುತ್ತಿದೆ.







ಸೃಷ್ಟಿಕರ್ತನಾದ ದೇವರು ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:
‘ನೋಹನೇ, ನೀನು, ನಿನ್ನ ಕುಟುಂಬ ಮತ್ತು
ಎಲ್ಲ ಪ್ರಾಣಿಗಳು ದೊಡ್ಡ, ದೊಡ್ಡ, ದೊಡ್ಡ
ನಾವೆಯೊಳಗೆ ಹೋಗಿ.

ಬೇಗನೆ, ದೊಡ್ಡ ಬಿರುಗಾಳಿ ಬರುತ್ತಿದೆ.’



ನೋಹನು, ಅವನ ಕುಟುಂಬ ಮತ್ತು ಎಲ್ಲ ಪ್ರಾಣಿಗಳು ದೊಡ್ಡ, ದೊಡ್ಡ, ದೊಡ್ಡ ನಾವೆಯೊಳಗೆ ಹೋಗುತ್ತಿರುವುದು ನನಗೆ ಕಾಣುತ್ತಿದೆ.









ನೀರು ಮೇಲೆ...ಮೇಲೆ...
ಮೇಲೆ ಏರುತ್ತಿದೆ.

ಭೂಮಿ ಮೇಲೆ ಜಲಪ್ರಳಯ...ಜಲಪ್ರಳಯ...
ಜಲಪ್ರಳಯ ಆಗುತ್ತಿದೆ.

ದೊಡ್ಡ, ದೊಡ್ಡ, ದೊಡ್ಡ ನಾವೆಯೊಳಗೆ
ನೋಹನು, ಅವನ ಕುಟುಂಬ ಮತ್ತು ಎಲ್ಲ
ಪ್ರಾಣಿಗಳು ವಿಶ್ರಮಿಸುತ್ತಾ...
ವಿಶ್ರಮಿಸುತ್ತಾ...ವಿಶ್ರಮಿಸುತ್ತಾ ಇದ್ದಾರೆ.







ದೊಡ್ಡ ಬಿರುಗಾಳಿ ನಿಲ್ಲುತ್ತಾ...
ನಿಲ್ಲುತ್ತಾ...ನಿಲ್ಲುತ್ತಾ ಇದೆ.


ನೀರು ಕೆಳಗೆ ಇಳಿಯುತ್ತಾ...ಇಳಿಯುತ್ತಾ...
ಇಳಿಯುತ್ತಾ ಇದೆ.



ಸೃಷ್ಟಿಕರ್ತನಾದ ದೇವರು ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:
‘ನೋಹನೇ, ನೀನು, ನಿನ್ನ ಕುಟುಂಬ ಮತ್ತು
ಎಲ್ಲ ಪ್ರಾಣಿಗಳು ದೊಡ್ಡ, ದೊಡ್ಡ, ದೊಡ್ಡ
ನಾವೆಯೊಳಗಿಂದ ಹೊರಗೆ ಬನ್ನಿ.’







ನೋಹನು, ಅವನ ಕುಟುಂಬ ಮತ್ತು
ಎಲ್ಲ ಪ್ರಾಣಿಗಳು ದೊಡ್ಡ, ದೊಡ್ಡ, ದೊಡ್ಡ
ನಾವೆಯೊಳಗಿಂದ ಬರುತ್ತಿರುವುದು
ನನಗೆ ಕಾಣುತ್ತಿದೆ.

ಆಕಾಶದಲ್ಲಿ ಬಣ್ಣಗಳ ರೇಖೆಗಳು
ಹೊಳೆಯುತ್ತಾ...ಹೊಳೆಯುತ್ತಾ...
ಹೊಳೆಯುತ್ತಾ ಇರುವುದು
ನನಗೆ ಕಾಣುತ್ತಿದೆ.







ಸೃಷ್ಟಿಕರ್ತನಾದ ದೇವರು ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: ‘ನಾನು
ನಿಮ್ಮನ್ನು ಕಾಪಾಡುತ್ತೇನೆ. ನೀವು ನನ್ನನ್ನು
ಕಂಡುಕೊಳ್ಳುವಿರಿ.’

ಸೃಷ್ಟಿಕರ್ತನಾದ ದೇವರು ಬರುತ್ತಿದ್ದಾನೆ.

# ವಿಶೇಷ ಕೊಡುಗೆ

ಅನೇಕ ವರ್ಷಗಳು ಕಳೆದವು...

ಒಬ್ಬ ಮನುಷ್ಯ ನನಗೆ ಕಾಣುತ್ತಿದ್ದಾನೆ.

ಅವನ ಹೆಸರು ಅಬ್ರಹಾಮ.







ಸೃಷ್ಟಿಕರ್ತನಾದ ದೇವರು ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ಅಬ್ರಹಾಮನೇ, ನಿನ್ನ ಮಕ್ಕಳ ಮೂಲಕ
ನಾನು ಅನೇಕ ಜನರನ್ನು ಕಾಪಾಡುತ್ತೇನೆ.’


ಅಬ್ರಹಾಮನು ತನ್ನ ಹೆಂಡತಿಯೊಂದಿಗಿರುವುದು
ನನಗೆ ಕಾಣುತ್ತಿದೆ.

ಆಕೆಯ ಹೆಸರು ಸಾರ.

ಅಬ್ರಹಾಮ ಮತ್ತು ಸಾರ
ಮಕ್ಕಳನ್ನು ಪಡೆದಿರಲಿಲ್ಲ.








ಅಬ್ರಹಾಮನು ಹೀಗೆ ಹೇಳುತ್ತಿರುವುದು
ನನಗೆ ಕೇಳಿಸುತ್ತಿದೆ:

‘ಸೃಷ್ಟಿಕರ್ತನಾದ ದೇವರು ಏನು
ಬೇಕಾದರೂ ಮಾಡಬಲ್ಲನು.’

ಸಾರಳು ಮರೆಯುತ್ತಾ...ಮರೆಯುತ್ತಾ...
ಮರೆಯುತ್ತಾ ಇದ್ದಾಳೆ.

ಅಬ್ರಹಾಮನು ಹೀಗೆ ಹೇಳುತ್ತಿದ್ದಾನೆ:

'ಸೃಷ್ಟಿಕರ್ತನಾದ ದೇವರು ಏನು ಬೇಕಾದರೂ ಮಾಡಬಲ್ಲನು.'







ಅನೇಕ ವರ್ಷಗಳು ಕಳೆದವು.

ಸೃಷ್ಟಿಕರ್ತನಾದ ದೇವರು ಏನು ಬೇಕಾದರೂ ಮಾಡಬಲ್ಲನು.

ಅಬ್ರಹಾಮ ಮತ್ತು ಅವನ ಹೆಂಡತಿ
ನನಗೆ ಕಾಣುತ್ತಿದ್ದಾರೆ.

ಅವರಿಗೆ ಒಬ್ಬ ಮಗನಿದ್ದಾನೆ.

ಅವನ ಹೆಸರು ಇಸಾಕ.

ಅಬ್ರಹಾಮ, ಸಾರ ಮತ್ತು ಇಸಾಕ ಹಾಡುತ್ತಾ...
ಹಾಡುತ್ತಾ...ಹಾಡುತ್ತಾ ಇದ್ದಾರೆ.








ಸೃಷ್ಟಿಕರ್ತನಾದ ದೇವರು ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:


‘ಅಬ್ರಹಾಮನೇ, ನಿನ್ನ ಮಗ ಇಸಾಕನನ್ನು
ನನಗೆ ಯಜ್ಞ ಮಾಡು.’

ಅಬ್ರಹಾಮನು ತನ್ನ ಮಗ
ಇಸಾಕನನ್ನು ಪ್ರೀತಿಸುತ್ತಿದ್ದನು.

ಇಸಾಕನು ತನ್ನ ತಂದೆ
ಅಬ್ರಹಾಮನನ್ನು ಪ್ರೀತಿಸುತ್ತಿದ್ದನು.





ಅವರು ಒಟ್ಟಿಗೆ ನಡೆಯುತ್ತಾ ಬೆಟ್ಟಕ್ಕೆ
ಏರಿ...ಏರಿ...ಏರಿ ಹೋಗುತ್ತಿದ್ದಾರೆ.

ಇಸಾಕನು ಹೀಗೆ ಹೇಳುತ್ತಿರುವುದು
ನನಗೆ ಕೇಳಿಸುತ್ತಿದೆ:

‘ಅಪ್ಪಾ, ಸೃಷ್ಟಿಕರ್ತನಾದ ದೇವರಿಗೆ
ಯಜ್ಞ ಮಾಡಲು ಕುರಿ ಎಲ್ಲಿದೆ?’







ಅಬ್ರಹಾಮನು ಹೀಗೆ ಹೇಳುತ್ತಿರುವುದು
ನನಗೆ ಕೇಳಿಸುತ್ತಿದೆ:


‘ಸೃಷ್ಟಿಕರ್ತನಾದ ದೇವರು ಯಜ್ಞಕ್ಕೆ
ಬೇಕಾದ ಕುರಿಯನ್ನು ಕೊಡುವನು.’

ಅಬ್ರಹಾಮನು ಹೀಗೆ ಹೇಳುತ್ತಿದ್ದಾನೆ:

‘ಸೃಷ್ಟಿಕರ್ತನಾದ ದೇವರು
ಏನು ಬೇಕಾದರೂ ಮಾಡಬಲ್ಲನು.’









ಇಸಾಕನು ಯಜ್ಞವೇದಿಕೆಗೆ
ಹತ್ತುತ್ತಿರುವುದು ನನಗೆ ಕಾಣುತ್ತಿದೆ.

ಅಬ್ರಹಾಮನು ತನ್ನ ಕತ್ತಿಯನ್ನು
ಮೇಲೆತ್ತುತ್ತಿರುವುದು ನನಗೆ ಕಾಣುತ್ತಿದೆ.



ಅಬ್ರಹಾಮನು ಹೀಗೆ ಹೇಳುತ್ತಿದ್ದಾನೆ:

‘ಸೃಷ್ಟಿಕರ್ತನಾದ ದೇವರು
ಏನು ಬೇಕಾದರೂ ಮಾಡಬಲ್ಲನು.’







ಸೃಷ್ಟಿಕರ್ತನಾದ ದೇವರು ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ಅಬ್ರಹಾಮನೇ, ನಿಲ್ಲಿಸು!

ಇಸಾಕನು ಬದುಕುವುದು ನನಗಿಷ್ಟ!

ನಾನು ಕೊಡುವ ಕುರಿಯನ್ನು
ಯಜ್ಞ ಮಾಡು.’

ಸೃಷ್ಟಿಕರ್ತನಾದ ದೇವರು ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ಅಬ್ರಹಾಮನೇ, ನಿನ್ನ ಮಕ್ಕಳ ಮೂಲಕ ನಾನು
ಅನೇಕ ಜನರನ್ನು ಕಾಪಾಡುತ್ತೇನೆ.’

ಸೃಷ್ಟಿಕರ್ತನಾದ ದೇವರು ಬರುತ್ತಿದ್ದಾನೆ.

